ಕೇಳಬಹುದು. ಆದರೆ ಈಗ ಆ ರೀತಿ ಸರಿಯಾಗಿ ನಮ್ಮ ಹತ್ತಿರ ಲೆಕ್ಕವಿಲ್ಲದಿರುವುದರಿಂದ ಅದರ ಬಗ್ಗೆ ಅಂದಾಜಿನಿಂದ ಹೇಳುವುದು ಬೇಡ. ಆದ್ದರಿಂದ ಈ ಕ್ರಮ ಅವಶ್ಯಕವಾಗಿದೆ. ಆನಂತರ ಕೆ.ಇ.ಬಿ.ನವರು ಮಾಡಿದ್ದೆಲ್ಲಾ ಏನೋ ಅಪರಾಧವೆನ್ನುವಂತೆ ದಯವಿಟ್ಟು ತಿಳಿದುಕೊಳ್ಳಬಾರದು. ಕೆ.ಇ.ಬಿ.ನೌಕರರ ಯೂನಿಯನ್ ಸ್ಥಾಪಕರಲ್ಲಿ ನಾನೂ ಒಬ್ಬ. ಅದರಲ್ಲಿ ತಪ್ಪು ಇರಬಹುದು. ಎಲ್ಲರೂ ತಪ್ಪು ಮಾಡದೆ ಸತ್ಯವಂತರೆಂದು ನಾನು ಹೇಳುವುದಿಲ್ಲ. ಕೆಲವು ನೌಕರರನ್ನು ಈ ಕೆಲಸದಲ್ಲಿ ಉಪಯೋಗ ಮಾಡಿಕೊಳ್ಳುತ್ತಿರಬಹುದು. ಸ್ಪ್ಯಾನರ್‌ನ್ನು ಯಾರು ಉಪಯೋಗಿಸುತ್ತಾರೆಂದರೆ ಬೋಲ್ಟ್‌ನ್ನು ತೆಗೆದು ಕಳ್ಳತನ ಮಾಡಬೇಕು ಎಂಬುವವನು ಮಾತ್ರ ಸ್ಪ್ಯಾನರ್‌ನ್ನು ಉಪಯೋಗಿಸುತ್ತಾನೆ. ಇಲ್ಲ ಕೆ.ಇ.ಬಿ. ನಲ್ಲಿರುವವರು ಈ ರೀತಿ ಕಳ್ಳತನ ಮಾಡಬಹುದು, ಆ ರೀತಿ ಕಳ್ಳತನ ಮಾಡಬಹುದು ಎಂದು ಹೇಳುವವರು ಇರುತ್ತಾರೆ. ಆದ್ದರಿಂದ ಕೆ.ಇ.ಬಿ. ಎಂದ ತಕ್ಷಣ ಏನೋ ಒಂದು ದುಷ್ಟರ ಕೂಟವೆಂದು ಭಾವಿಸುವುದು ಸರಿಯಲ್ಲ. ಪಾಪ ಕೆ.ಇ.ಬಿ. ನೌಕರರ ಸೇವೆ, ಅವರು ಹೋಗತಕ್ಕ ದಾರಿ, ಕಾಡು, ಅವರು ಅನುಭವಿಸತಕ್ಕ ಕಷ್ಟ ಬಹಳವಾದುದು. ಕೆಲವರು ಮಿಸ್‌ಚಿವಸ್ ಇರಬಹುದು. ಹಾಗೆಂದು ಇಡೀ ಕೆ.ಇ.ಬಿ.ಯ ಮೆಲೆ ಕೋಪ ಮಾಡಿಕೊಳ್ಳುವುದು ಬೇಡ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಹೇಳುವುದೆನೆಂದರೆ, ಸದನದಲ್ಲಿ ಒಂದು ತೀರ್ಮಾನವಾಗಿದೆ, ಕೆ.ಇ.ಬಿ.ಯಲ್ಲಿ ಯಾರು ಅಪರಾಧವನ್ನು ಮಾಡುತ್ತಾರೆ ಅಂಥವರ ಮೇಲೆ ಏನು ಎವಿಡೆನ್ಸ್ ಬರುತ್ತದೆ, ಅಂಥವರ ಮೇಲೆ ನಾವೇನಾದರೂ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡರೆ ಯಾರೂ ಮಧ್ಯ ಪ್ರವೇಶ ಮಾಡಬಾರದು. ಮಾನ್ಯ ಅಧ್ಯಕ್ಷರು ಆ ರೀತಿ ಸಲಹೆ ಮಾಡಿದ್ದಾರೆ. ಆ ರೀತಿ ಯಾರಾದರೂ ಮಧ್ಯ ಪ್ರವೇಶ ಮಾಡಿದರೆ ನಾನು ಅಧ್ಯಕ್ಷರಿಗೆ ತಿಳಿಸುತ್ತೇನೆ; ಇದು ಪ್ರಜಾಪ್ರಭುತ್ವ ಪದ್ದತಿ, ವಿಷಯಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕು, ಆದರೆ ಹಠ ಹಿಡಿದುಕೊಂಡು ಕುಳಿತು ನಾವು ಕೇಳುವುದೇ ಇಲ್ಲವೆಂದು ಮಾಡಲು ಹೋಗಬೇಡಿ. ಇದು ಸರ್ಕಾರದ ಮನವಿಯೆಂದು ತಮ್ಮಲ್ಲಿ ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇವತ್ತು ಖಾಸಗಿ ಕಾರ್ಯಕಲಾಪಗಳ ದಿನ, ನಮ್ಮದೊಂದು ನಿರ್ಣಯವಿದೆ ಮತ್ತು ಪ್ರಶ್ನೋತ್ತರ ಇದೆ, ಅದಕ್ಕೆ ತಾವು ಅನುಮತಿ ಕೊಟ್ಟಿಲ್ಲ.

ಅಧ್ಯಕ್ಷರು:- ಪ್ರಶ್ನೋತ್ತರ ಇಲ್ಲ. ಆದರೆ ತಮ್ಮ ನಿರ್ಣಯಕ್ಕೆ ಈ ಸಮಯ ಸರಿಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಪಾನ ನಿರೋಧ ಜಾರಿಗೆ ತರುವ ಬಗ್ಗೆ ನಿರ್ಣಯವಿತ್ತು...

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಅ. ಸಿರಗುಪ್ಪದಲ್ಲಿ ಜೈನ ಸಮಾಜದವರ ಮೇಲೆ ಮೊಕದ್ದಮೆ.

ಅಧ್ಯಕ್ಷರು:- ಸನ್ಮಾನ್ಯ ಸಭಾನಾಯಕರಲ್ಲಿ ಒಂದು ವಿಚಾರವನ್ನು ಗಮನಕ್ಕೆ ತರಬೇಕಾಗಿತ್ತು. ಅದೇನೆಂದರೆ, ಸಿರಗುಪ್ಪದಲ್ಲಿ ದುರಾದೃಷ್ಟವಶಾತ್ ಎರಡು ಅಲ್ಪ ಸಂಖ್ಯಾತ ಕೋಮುಗಳ ಮಧ್ಯ ಸ್ವಲ್ಪ ಘರ್ಷಣೆಯಾಗಿದೆಯಂತೆ. ಜೈನ್ ಸಮಾಜಕ್ಕೆ ಸೇರಿದವರು ವಾಸವಿರುವುದೆ 70, 80 ಜನರು. ಇನ್ನೊಂದು ಅಲ್ಪಸಂಖ್ಯಾತ ಜನರು ಸ್ವಲ್ಪ ಹೆಚ್ಚಿಗೆ ಇದ್ದಾರೆ. ಆ ಜೈನ ಸಮಾಜದ ಸುಮಾರು ನಲವತ್ತು

ಜನರ ಮೇಲೆ ಈಗಾಗಲೇ ಮೊಕದ್ದಮೆ ಹೂಡಿದ್ದಾರಂತೆ. ಅವರೆಲ್ಲರೂ ಊರು ಬಿಟ್ಟು ಇಲ್ಲಿಗೆ ಓಡಿ ಬಂದುಬಿಟ್ಟಿದ್ದಾರೆ. ಇದರ ಬಗ್ಗೆ ಹಲವಾರು ಜನ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮೊನ್ನೆ ರಂಜಾನ್ ಹಬ್ಬವಿತ್ತಲ್ಲಾ ಆ ದಿನವೇ ಜೈನ ದೇವರ ಪ್ರತಿಷ್ಠಾವನೆ ಇತ್ತು. ಅವರ ತೀರ್ಥಂಕರ ಗುಡಿಯನ್ನು ಕಟ್ಟಿಸಿದ್ದರು. ಆಗ ಆ ರೀತಿಯಾಗಿದೆ.

ಅಧ್ಯಕ್ಷರು:- ಸಿರಗುಪ್ಪದಲ್ಲಿ ವಾಸವಿರತಕ್ಕ ಇಡೀ ಜೈನ ಸಮಾಜದ ಸಂಖ್ಯೆ 70 ಇಲ್ಲವೆ 80. ಅದರಲ್ಲಿ ಅರ್ಧಭಾಗದಷ್ಟು ಜನರ ಮೇಲೆ ಮೊಕದ್ದಮೆ ಹಾಕಿದ್ದಾರಂತೆ. ಅಲ್ಲಿನ ಹೆಣ್ಣು ಮಕ್ಕಳು ಮತ್ತು ಇತರರು ಹೆದರಿಕೊಂಡು ಇಲ್ಲಿಗೆ ಬಂದುಬಿಟ್ಟಿದ್ದಾರಂತೆ. ಆದ್ದರಿಂದ ಅಲ್ಲಿನ ಅಧಿಕಾರಿಗಳ್ಯಾರಿದ್ದಾರೆ ಅವರಿಗೆ ಸೂಚನೆ ಕೊಟ್ಟು ಹಿಂಸೆ ಮಾಡದಂತೆ ಅವರುಗಳು ಊರಿಗೆ ಹೋಗಲು ಅವಕಾಶ ಮಾಡಿಕೊಟ್ಟರೆ ಸಾಕು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಅಲ್ಲಿ ಈಗ ಶಾಂತಿ ಇದೆ. ಅದರ ಬಗ್ಗೆ ವಿಚಾರಿಸುತ್ತೇನೆ. ಅದರ ಬಗ್ಗೆ ನೋಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೆ, ಲೂಟಿ ಬಹಳವಾಗಿದೆ, ಆದ್ದರಿಂದ ಪರಿಹಾರಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಹೇಳಲು ಅಸಾಧ್ಯವಾದಷ್ಟು ಲೂಟಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇಷ್ಟು ಲೂಟಿಯೇ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಪರಿಹಾರಕ್ಕಿಂತ ರಕ್ಷಣೆ ಕೊಟ್ಟರೆ ಸಾಕು.

ಅಧ್ಯಕ್ಷರು:- ನನ್ನ ಅಭಿಪ್ರಾಯವೂ ಅದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಎರಡೂ ಆಗಬೇಕೆಲ್ಲವೇ?

ಅಧ್ಯಕ್ಷರು:- ಪರಿಹಾರದ್ದನ್ನು ಪರಿಹಾರ ಮಾಡೋಣ. ಮೊದಲು ರಕ್ಷಣೆ ಮುಖ್ಯ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಹಾಗಾದರೆ ನಮ್ಮ ನಿರ್ಣಯ ಚರ್ಚೆಗೆ ತೆಗೆದುಕೊಳ್ಳುವುದಿಲ್ಲವೆ?

ಅಧ್ಯಕ್ಷರು:- ಮುಂದಿನ ಶುಕ್ರವಾರ ತೆಗೆದುಕೊಳ್ಳೋಣ.

ಆ. ಜಿಲ್ಲಾ ಪುನರ್‌ಎಂಗಡಣೆ ಕುರಿತು.

ಶ್ರೀ ವಾಟಾಳ್ ನಾಗರಾಜ್:- ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸಿಕ್ಕುವುದೇ ಬಹಳ ಕಷ್ಟ. ನಿನ್ನೆಯಿಂದ ಅವರನ್ನು ಕಾಯುತ್ತಿದ್ದೆವು. ಅದೇನೋ ಇಂದು ಬೆಳಿಗ್ಗೆ ಒಂಭತ್ತೂವರೆಯಿಂದ ಇಲ್ಲಿ ಕುಳಿತುಕೊಂಡಿದ್ದಾರೆ. ಜಿಲ್ಲಾ ಪುನರ್ವಿಂಗಡಣೆಯ ಬಗ್ಗೆ ಸರ್ಕಾರದ ನಿರ್ಧಾರವಿದೆಯೆಲ್ಲಾ ಅದರ ಬಗ್ಗೆ ಈ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವು ಮುಗಿಯುವುದರೊಳಗೆ ಅವರು ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ಎಲ್ಲಾ ವಿಚಾರವನ್ನು ಸೋಮವಾರ ತೆಗೆದುಕೊಳ್ಳೋಣ. ನಿಮ್ಮ ಹಿಂದೆ ಮಾತನಾಡಲು ಇನ್ನು ಎಷ್ಟು ಜನರು ಎದ್ದಿದ್ದಾರೆ ನೋಡಿ. ಮುಖ್ಯಮಂತ್ರಿಗಳು ಇಂದು ಬೆಳಿಗ್ಗೆ ಒಂಭತ್ತೂವರೆಗೆ ಬಂದು ಇಲ್ಲಿಯವರೆಗೆ ಇದ್ದಾರೆಂದು ತಾವೇ ಹೇಳಿದ್ದೀರಿ.